MAY 17, 2026

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**‘ಒಂದು ರಾಷ್ಟ್ರ, ಒಂದು ಚುನಾವಣೆ’ಯಿಂದ,** ದೇಶದ ಖಜಾನೆಯ 7 ಲಕ್ಷ ಕೋಟಿ ರೂಪಾಯಿ ಉಳಿತಾಯವಾಗಲಿದೆ ಎಂದು ಕೇಂದ್ರ ಜಂಟಿ ಸಂಸದೀಯ ಸಮಿತಿ ಅಧ್ಯಕ್ಷ ಪಿ.ಪಿ ಚೌಧರಿ ಅಭಿಪ್ರಾಯಪಟ್ಟರು. ಬೆಂಗಳೂರಿನಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ, ಬಿಜೆಪಿ ಸೇರಿದಂತೆ ವಿವಿಧ ರಾಜಕೀಯ ಪಕ್ಷಗಳ ಮುಖಂಡರ ಜೊತೆ ‘ಒಂದು ರಾಷ್ಟ್ರ, ಒಂದು ಚುನಾವಣೆ’ ಕುರಿತ ವಿಚಾರ ಮಂಡನೆ ನಡೆಸಿದ ಬಳಿಕ ಸುದ್ದಿಗೋಷ್ಠಿ ಉದ್ದೇಶಿಸಿ ಅವರು ಮಾತನಾಡಿದರು. ಕರ್ನಾಟಕ ಸೇರಿದಂತೆ ಒಟ್ಟು ಏಳು ರಾಜ್ಯಗಳಲ್ಲಿ ಮಸೂದೆ ಕುರಿತು ವಿಚಾರ ಮಂಡಿಸಲಾಗಿದೆ, ವಿವಿಧ ರಾಜಕೀಯ ಮುಖಂಡರ ಅಭಿಪ್ರಾಯ ಸಂಗ್ರಹಿಸಿ ಅಂತಿಮ ವರದಿ ಸಿದ್ಧಪಡಿಸಲಾಗುವುದು ಎಂದರು.

<><><>

**ಪಿ.ಪಿ ಚೌಧರಿ ಧ್ವನಿ– 38 ಸೆಕೆಂದುಗಳು**

<><><>

**‘ಡೆಂಘಿ ನಿಯಂತ್ರಣಕ್ಕಾಗಿ, ಸಮುದಾಯದ ಪಾಲ್ಗೊಳ್ಳುವಿಕೆ;** ಪರಿಶೀಲಿಸಿ, ಸ್ವಚ್ಛಗೊಳಿಸಿ ಹಾಗೂ ಮುಚ್ಚಿಡಿ’ ಎಂಬ, ಘೋಷ ವಾಕ್ಯದೊಂದಿಗೆ, ‘ರಾಷ್ಟ್ರೀಯ ಡೆಂಘಿ ದಿನಾಚರಣೆ ಜಾಗೃತಿ ಜಾಥಾ’, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ರಾಜ್ಯಾದ್ಯಂತ ಆಯೋಜಿಸಿತ್ತು. ಬಳ್ಳಾರಿ ಜಿಲ್ಲೆ, ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ವಿಭಾಗದಿಂದ, ಆಯೋಜಿಸಿದ್ದ ಜನ ಜಾಗೃತಿ ಜಾಥಾಕ್ಕೆ, ಜಿಲ್ಲಾ ಆರೋಗ್ಯಾಧಿಕಾರಿ, ಡಾಕ್ಟರ್ ಯಲ್ಲಾ ರಮೇಶಬಾಬು ಚಾಲನೆ ನೀಡಿದರು. ಈಡೀಸ್ ಈಜಿಪ್ಟೈ ಸೊಳ್ಳೆಗಳ ಸಂತತಿ ವೃದ್ಧಿಸದಂತೆ, ಮನೆಯ ಸುತ್ತಮುತ್ತ ಸ್ವಚ್ಛತೆ ಕಾಪಾಡಲು, ಮನವಿ ಮಾಡಿದರು.

<><><>

**ವಿಜಯನಗರ ಜಿಲ್ಲೆಯನ್ನು** ಡೆಂಘಿ, ಮಲೇರಿಯಾ, ಕಾಲರಾ ರೋಗ ಮುಕ್ತವಾಗಿಸಲು, ಅಧಿಕಾರಿಗಳು ಅಗತ್ಯ ಮುಂಜಾಗ್ರತಾ ಕ್ರಮ ವಹಿಸಬೇಕು ಎಂದು ಜಿಲ್ಲಾಧಿಕಾರಿ ಕವಿತಾ.ಎಸ್ ಮನ್ನಿಕೇರಿ ಕರೆ ನೀಡಿದ್ದಾರೆ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಆಯೋಜಿತ ಅಂತ ಇಲಾಖೆ ಸಮನ್ವಯ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

<><><>

**ಕರ್ನಾಟಕ ರಾಜ್ಯ ಮಹಿಳಾ ಆಯೋಗದ** ಅಧ್ಯಕ್ಷರಾದ ಡಾಕ್ಟರ ನಾಗಲಕ್ಷ್ಮೀ ಚೌಧರಿ, ಎರಡು ದಿನಗಳ ಧಾರವಾಡ ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ. ಈ ಮಧ್ಯಾಹ್ನ 12.30 ಕ್ಕೆ ಹುಬ್ಬಳ್ಳಿ ತಾಲೂಕು, ಅಯೋಧ್ಯ ಗ್ರಾಮಕ್ಕೆ ತೆರಳಲಿರುವ ಅವರು, ಗಿರಿಜನ ಮಹಿಳೆಯರಿಗೆ ಮಂಜೂರಾಗಿರುವ ಸ್ಥಳವನ್ನು ಪರಿಶೀಲಿಸಲಿದ್ದಾರೆ.

<><><>

**ಕೃಷಿ ಪರಿಕರಗಳ, ಗುಣಮಟ್ಟ ನಿಯಂತ್ರಣ** ನಿಯಮಗಳು ಹಾಗೂ ಮಾರ್ಗಸೂಚಿಗಳ ಕುರಿತು, ಒಂದು ದಿನದ ಕಾರ್ಯಾಗಾರ, ಗದಗ ಜಿಲ್ಲೆ ನಾಗಾವಿಯ, ಮಹಾತ್ಮ ಗಾಂಧಿ, ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯಿತಿರಾಜ್ ವಿಶ್ವವಿದ್ಯಾಲಯದ ಸಭಾಭವನದಲ್ಲಿ, ಜರುಗಿತು. ಕಾರ್ಯಾಗಾರಕ್ಕೆ ಚಾಲನೆ ನೀಡಿದ, ಕೃಷಿ ಮತ್ತು ಸಂಬಂಧಿತ ಕಾನೂನುಗಳ ಕೇಂದ್ರದ ನಿರ್ದೇಶಕ, ವೆಂಕಟರಮಣಪ್ಪ, ಕೃಷಿ ಪರಿಕರಗಳ ಗುಣಮಟ್ಟ ಕಾಪಾಡುವ ಮಹತ್ವ, ಪರವಾನಿಗೆ ನಿಯಮಗಳು, ದಾಖಲೆ ನಿರ್ವಹಣೆ, ಕೃಷಿ ಪರಿಕರಗಳ ಸಂಗ್ರಹ ವಿಧಾನಗಳು, ಮಾರಾಟ ನಿಯಮಗಳು ಹಾಗೂ ಸರ್ಕಾರದ ವಿವಿಧ ಕಾಯ್ದೆ ಮತ್ತು ನಿಯಮಾವಳಿಗಳ ಬಗ್ಗೆ, ರೈತರಿಗೆ ಮಾಹಿತಿ ನೀಡಿದರು.

<><><>

**ಜಾನಪದ ಕಲೆಗಳ ಸಂರಕ್ಷಣೆ ಕಾರ್ಯವು,** ಸಂಸ್ಕೃತಿ ಹಾಗೂ ಅಸ್ತಿತ್ವವನ್ನು ಉಳಿಸಿದಂತೆ ಎಂದು ಕರ್ನಾಟಕ ಜಾನಪದ ಅಕಾದೆಮಿ ಮಾಜಿ ಅಧ್ಯಕ್ಷ ಡಾಕ್ಟರ ಬಾನಂದೂರು ಕೆಂಪಯ್ಯ ಹೇಳಿದರು. ಕೋಲಾರ ತಾಲೂಕು, ಅಮ್ಮೇರಹಳ್ಳಿಯಲ್ಲಿ ಆಯೋಜಿತ, ಜಾನಪದ ಝೇಂಕಾರ ಹಾಗೂ ಮಕ್ಕಳ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದರು. ಜಾನಪದ ಎನ್ನುವುದು ಕೇವಲ ಮನೋರಂಜನೆಯ ಮಾಧ್ಯಮವಲ್ಲ. ಅದು ಪೂರ್ವಜರ ಬದುಕಿನ ಅನುಭವಗಳ ಜೀವಂತ ಸಾಕ್ಷಿ ಎಂದರು.

<><><>

**ಬಾಗಲಕೋಟೆ ನವನಗರದ ತೋಟಗಾರಿಕೆ** ವಿಜ್ಞಾನಗಳ ವಿಶ್ವವಿದ್ಯಾಲಯದ, ಉದ್ಯಾನಗಿರಿಯಲ್ಲಿ ಆಯೋಜಿತ ಮೂರು ದಿನಗಳ ಮಾವು ಮೇಳಕ್ಕೆ ವಿಧಾನ ಪರಿಷತ್ ಸದಸ್ಯ ಹನಮಂತ ನಿರಾಣಿ ಚಾಲನೆ ನೀಡಿದರು. ಈ ಸಂದರ್ಭ ಮಾತನಾಡಿದ ಅವರು ಉತ್ತರ ಕರ್ನಾಟಕದಲ್ಲಿ ಮಾವು ಬೆಳೆಗೆ ವಿಪುಲ ಅವಕಾಶಗಳಿವೆ. ರೈತರು ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಬೇಕು, ಮಾವು ಬೆಳೆಗಾರರ ಹಿತದೃಷ್ಟಿಯಿಂದ ಮುಂದಿನ ದಿನಗಳಲ್ಲಿ, ಮಾವು ನಿಗಮ ಹಾಗೂ ಮಾವು ಸಂಶೋಧನ ಕೇಂದ್ರ ಸ್ಥಾಪನೆ ಕುರಿತು ಸರ್ಕಾರದ ಮಟ್ಟದಲ್ಲಿ ಚರ್ಚಿಸಲಾಗುವುದು ಎಂದರು.

<><><>

**ಕರ್ನಾಟಕ ಬ್ಯಾಡ್ಮಿಂಟನ್ ಅಸೋಸಿಯೇಶನ್ ಹಾಗೂ** ವಿಜಯಪುರ ಜಿಲ್ಲಾಡಳಿತ ಸಹಯೋಗದಲ್ಲಿ, ಇಂದಿನಿಂದ ನಗರದ ಡಾಕ್ಟರ ಬಿ.ಆರ್ ಅಂಬೇಡ್ಕರ್ ಹಾಗೂ ಬಿ.ಎಲ್.ಡಿ.ಇ ಒಳಾಂಗಣ ಕ್ರೀಡಾಂಗಣಗಳಲ್ಲಿ, ರಾಜ್ಯ ಮಟ್ಟದ ಬ್ಯಾಡ್ಮಿಂಟನ್ ಪಂದ್ಯಾವಳಿ ಆಯೋಜಿಸಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ ಪಾಟೀಲ್ ತಿಳಿಸಿದ್ದಾರೆ. 23 ರ ವರೆಗೆ ಜರುಗುವ ಪಂದ್ಯಾವಳಿಯಲ್ಲಿ 15 ರಿಂದ 17 ವರ್ಷ ವಯಸ್ಸಿನ ಪ್ರತಿಭಾನ್ವಿತ ಕ್ರೀಡಾಪಟುಗಳು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದ್ದಾರೆ.

<><><>

**ದಕ್ಷಿಣಕನ್ನಡ ಜಿಲ್ಲೆ, ಮಂಗಳೂರಿನ ಕದ್ರಿ ಉದ್ಯಾನದಲ್ಲಿ, ಗೇರು** ಅಭಿವೃದ್ಧಿ ನಿಗಮ, ಇಂದು ಮತ್ತು ನಾಳೆ, ರಾಜ್ಯ ಮಟ್ಟದ ಗೇರು ಮೇಳ ಹಾಗೂ ಗೇರು ಕೃಷಿ ಕಾರ್ಯಾಗಾರ ಆಯೋಜಿಸಿದೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ**

<><><>